



ಸಿಂಪಲ್ಲಾಗಿರುವ ಖಾದಿ ಸೀರೆ, ಸಿಲ್ಕ್ ಸೀರೆ ಅಥವಾ ಪ್ಲೇನ್ ಸೀರೆಗೆ ಸಖತ್ತಾಗಿ ಮ್ಯಾಚ್ ಆಗುತ್ತವೆ. ಇಕೊ ಫ್ರೆಂಡ್ಲಿಯಾಗಿರುವ ಇಂಥ ಜ್ಯುವೆಲರಿಗಳು ಧರಿಸಿಕೊಳ್ಳಲೂ ಆರಾಮದಾಯಕವಾಗಿರುತ್ತವೆ.

ಸೀಡ್ಸ್‌ನಿಂದ ತಯಾರಾಗುವ ಕಿವಿಯೋಲೆಗಳು ನೋಡಲು ಆಕರ್ಷಕವಾಗಿದ್ದು, ಇವುಗಳನ್ನು ಅವುಗಳ ಆಕಾರಕ್ಕೆ ಅನುಗುಣವಾಗಿ ವಿನ್ಯಾಸ ಮಾಡಲಾಗುತ್ತಿದೆ. ಹಾಗೇ ಬೇರೆ ಬೇರೆ ಆಕಾರ, ಬಣ್ಣಗಳಲ್ಲಿ ದೊರೆಯುವ ಬೀಜಗಳನ್ನು ತಂದು ತಮ್ಮ ಕಲಾತ್ಮಕತೆಗೆ ಅನುಗುಣವಾಗಿ ಹ್ಯಾಂಗಿಂಗ್ಸ್‌ಗಳನ್ನು ತಯಾರಿಸಬಹುದಾಗಿದೆ. ಇವುಗಳ ಜೊತೆ ಆಲಂಕಾರಿಕ ವಸ್ತುಗಳಾದ ಮಣಿ, ಕುಂದನ್, ಮಿರರ್ ಅಲ್ಲದೆ ಬೇರೆ ಬೇರೆ ತರಹದ ಡಾಲರ್‌ಗಳು ಹಾಗೂ ಸ್ಟಿಕರ್‌ಗಳನ್ನೂ ಬಳಸಬಹುದಾಗಿದೆ. ಈ ತರಹದ ಇಯರ್ ರಿಂಗ್ಸ್‌ಗಳು ನಾವು ಧರಿಸುವ ಬಟ್ಟೆಗಳಿಗೂ ಚೆನ್ನಾಗಿ ಕಾಣುತ್ತವೆ.

ಭತ್ತದಿಂದ ತಯಾರಿಸಿದ ಕಿವಿಯೋಲೆ, ಹಾರ ಕೂಡ ಸಾಕಷ್ಟು ಟ್ರೆಂಡಿಯಾಗಿದೆ. ಚಿಕ್ಕ ಆಕಾರದಿಂದ ಹಿಡಿದು ದೊಡ್ಡ ದೊಡ್ಡ ಆಕಾರದ ರುದ್ರಾಕ್ಷಿಯಿಂದ ತಯಾರಿಸಿದ ಹಾರಗಳು, ತುಳಸೀ ಮಣಿ ಹಾರಗಳು ಎಲ್ಲವೂ ಇದೀಗ ಫ್ಯಾಷನ್ ಜಗತ್ತನ್ನು ಅಲಂಕರಿಸಿವೆ. ಯಾವುದಾದರೂ ದೇವಸ್ಥಾನಗಳಿಗೆ ಹೋಗಬೇಕಾದರೆ ಪುರುಷರು, ಮಹಿಳೆಯರು ಎನ್ನದೆ ಜನರು ರುದ್ರಾಕ್ಷಿ ಮಾಲೆಯನ್ನು ಧರಿಸುತ್ತಿದ್ದಾರೆ. ಇದೀಗ ಆನ್‌ಲೈನ್‌ನಲ್ಲಿ ಕೂಡ ದೊರಕುತ್ತಿರುವ ಈ ತರಹದ ಜ್ಯುವೆಲರಿಗಳು ಯುವಜನತೆಯ ಹಾಟ್ ಫೇವರೆಟ್ ಎಂತಲೇ ಹೇಳಬಹುದು. ಹಾಗೇ ಆನ್‌ಲೈನ್ ಮುಖಾಂತರ ಜ್ಯುವೆಲರಿ ಮೇಕಿಂಗ್ ಕ್ಲಾಸಸ್ ಕೂಡ ಪ್ರಾರಂಭವಾಗಿವೆ. ಈ ತರಹದ ಜ್ಯುವೆಲ್ಲರಿಗಳನ್ನು ಮಾಡುವ ಸುಲಭ ವಿಧಾನ ಕೂಡ ಕಲಿತುಕೊಳ್ಳಬಹುದಾಗಿದೆ. ಮನೆಯಲ್ಲಿಯೇ ಕುಳಿತು ಜ್ಯುವೆಲ್ಲರಿ ಮೇಕಿಂಗ್ ಕಿಟ್ ತರಿಸಿಕೊಂಡು ಕಲಾತ್ಮಕ ಆಭರಣ ತಯಾರಿಸಿಕೊಳ್ಳಬಹುದು.

